ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ, ಯಾದಗಿರಿ.

ಸಿ.ಸಿ ನಂಃ **517/2022**

| | | |
|---|---|---|
| ಸಾಕ್ಷಿಯ ಹೆಸರುಃ | ಗುರುರಾಜ | ಪ್ರಾಸಾಃ 4 |
| ಗಂಡನ/ತಂದೆಯ ಹೆಸರುಃ | ಬಸವರಾಜ | ಚಾಸಾಃ 4 |
| ವಯಸ್ಸುಃ | 35 ವರ್ಷ | ದಿಃ20-09-2024 |
| ಉದ್ಯೋಗಃ | ವ್ಯಾಪಾರ | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ಯರಗೋಳ | |

ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ

ಚಾಸಾಃ 1 ನನ್ನ ತಂದೆ. ನನಗೆ ಚಾಸಾಃ 5 ರಿಂದ 8 ರವರು ಹಾಗೂ ಆರೋಪಿತರ ಪರಿಚಯವಿದೆ. ದಿನಾಂಕಃ 06-09-2021 ರಂದು ಮುಂಜಾನೆಃ 10 ರಿಂದ 10.30 ಗಂಟೆ ಸುಮಾರಿಗೆ ಆರೋಪಿತರು ಎಲ್ಲರೂ ಬಂದು ನನಗೆ ಏ ಬೋಸಡಿ ಮಗನೇ ಎಂದು ಹೇಳಿ ಅವಾಚ್ಯ ಶಬ್ದಗಳಿಂದ ಬೈದಿರುತ್ತಾನೆ. ನಂತರ ನನ್ನ ಎದೆಯ ಮೇಲಿನ ಅಂಗಿ ಹಿಡಿದುಕೊಂಡು ನನಗೆ ಕಾಲಿನಿಂದ ಒದ್ದು ಕೆಳಗಡೆ ಹಾಕಿ ಹೊಡೆದಿರುತ್ತಾರೆ. ನನ್ನ ತಂದೆ ಬಂದು ಯಾಕೆ ಜಗಳ ಮಾಡುತ್ತಿದ್ದೀರಾ ಎಂದು ಕೇಳಿದಾಗ ಆಗ ಆರೋಪಿತರು ನನ್ನ ತಂದೆಯನ್ನು ದಬ್ಬಿ ಹೊಡೆದಿರುತ್ತಾರೆ. ನನ್ನ ಮೊಬೈಲ ಮತ್ತು 80,000/- ರೂ. ಹಣವನ್ನು ಆರೋಪಿತರು ಕಸಿದುಕೊಂಡಿರುತ್ತಾರೆ. ಚಾಸಾಃ 5 ಮತ್ತು 6 ರವರು ಜಗಳವನ್ನು ಬಿಡಿಸಿರುತ್ತಾರೆ. ಸದರಿ ಹಣ ಮತ್ತು ಮೊಬೈಲ ಕೇಳಿದಾಗ ನೀನು ಹೊರಗಡೆ ಬಾ ನಿನ್ನನ್ನು ಖಲಾಸ ಮಾಡುತ್ತೇವೆ ಎಂದು ಜೀವ ಬೆದರಿಕೆಯನ್ನು ಹಾಕಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯು ಭಾಗಶಃ ಪ್ರತಿಕೂಲವಾಗಿ ನುಡಿಯುತ್ತಿದ್ದುದರಿಂದ ಸರಕಾರಿ ಸಹಾಯಕ ಅಭಿಯೋಜಕರು ಪಾಟಿ ಸವಾಲಿಗಾಗಿ ಅವಕಾಶ ಕೋರಿದ್ದು ನ್ಯಾಯಾಲಯದ ಮುಂದಿರುವ ದಾಖಲಾತಿಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

2 ನೇ ಆರೋಪಿತನು ನನಗೆ ಕೈಯಿಂದ ಮುಖಕ್ಕೆ ಹೊಡೆದಿರುತ್ತಾನೆ ಎಂದರೆ ಸರಿ. ನಾನು ಹೆದರಿ ಮನೆ ಕಡೆಗೆ ಹೋಗುವಾಗ ನನ್ನ ತಂದೆಯನ್ನು ಆರೋಪಿತರು ಅಡ್ಡಗಟ್ಟಿ ನಿಲ್ಲಿಸಿರುತ್ತಾರೆ ಎಂದರೆ ಸರಿ.

ಪಾಟಿ ಸವಾಲು ಃಆರೋಪಿತರ ಪರ ಶ್ರೀ. ಕೆ. ಎಮ್. ಪಿ.. ವಕೀಲರಿಂದ

1. ನಮ್ಮ ಕುಟುಂಬ ಮತ್ತು ಆರೋಪಿತರ ಕುಟುಂಬದವರು ಸಂಬಂಧಿಕರು ಎಂದರೆ ಸರಿ. ನಮ್ಮ ಮನೆ ಮತ್ತು ಆರೋಪಿತರ ಮನೆ ಎದುರು-ಬದುರು ಇದೆ ಎಂದರೆ ಸರಿಯಲ್ಲ. ಇಬ್ಬರ ಮನೆಗಳು ಒಂದೇ ಓಣಿಯಲ್ಲಿ ಇರುತ್ತದೆ ಎಂದರೆ ಸರಿ. ಸದರಿ ನನ್ನ ತಂದೆ, ಆರೋಪಿತರು ಮತ್ತು ನಮ್ಮ ಓಣಿಯವರು ಎಲ್ಲರೂ ಜೊತೆಗೂಡಿ ಲಕ್ಷ್ಮಿ ದೇವರ ಗುಡಿಗೋಸ್ಕರ ಚಂದಾ ಸಂಗ್ರಹಿಸಿರುತ್ತೇವೆ ಎಂದರೆ ಸರಿ. ಆ ಹಣ ಎಷ್ಟು ಸಂಗ್ರಹ ಆಗಿರುತ್ತದೆ ಎಂಬುದರ ಬಗ್ಗೆ ಮಾಹಿತಿ ನನಗೆ ಇಲ್ಲ. ಸದರಿ ಹಣ ಸಂಗ್ರಹ ಆದ ಬಗ್ಗೆ ನನಗೆ ಮಾಹಿತಿ ಇದ್ದರೂ ಕೂಡ ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ 1 ನೇ ಆರೋಪಿತನು ಸಂಗ್ರಹವಾದ ಹಣದ ಬಗ್ಗೆ ನನ್ನ ತಂದೆಗೆ ಕೇಳಿದ ಮೇರೆಗೆ ನನ್ನ ತಂದೆ 1 ನೇ ಆರೋಪಿತನಿಗೆ ಕಪಾಳಕ್ಕೆ ಹೊಡೆದಿರುತ್ತಾನೆ ಎಂದರೆ ಸರಿಯಲ್ಲ. ಈ ಘಟನೆಕ್ಕಿಂತ ಒಂದು ಮುಂಚೆ ರಾತ್ರಿ 9.00 ಗಂಟೆ ಸುಮಾರಿಗೆ ಚಾಸಾಃ 1 ರವರು 1 ನೇ ಆರೋಪಿತನಿಗೆ ಹೊಡೆದಿರುತ್ತಾನೆ ಎಂದರೆ ಸರಿಯಲ್ಲ. ಸದರಿ 1 ನೇ ಆರೋಪಿತನು ಹಣ ಸಂಗ್ರಹವಾದ ಬಗ್ಗೆ ಕೇಳಿದ್ದಕ್ಕೆ ಚಾಸಾಃ 1 ರವರು ಹೊಡೆದಿರುತ್ತಾರೆ ಎಂದರೆ ಸರಿಯಲ್ಲ.

2. ಸದರಿ ಚಾಸಾಃ 1 ರವರು 1 ನೇ ಆರೋಪಿತನಿಗೆ ಹೊಡೆದಿರುವ ವಿಷಯ 2 ಮತ್ತು 3 ನೇ ಆರೋಪಿತರಿಗೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ಮರುದಿನ ದಿನಾಂಕಃ 06-09-2021 ರಂದು 2 ಮತ್ತು 3 ನೇ ಆರೋಪಿತರು ಬಂದು ನನಗೆ ಜಗಳವಾದ ವಿಷಯದ ಬಗ್ಗೆ ಕೇಳಿದಾಗ ನಾನು 2 ಮತ್ತು 3 ನೇ ಆರೋಪಿತರಿಗೆ ಹೊಡೆದಿರುತ್ತೇನೆ ಎಂದರೆ ಸರಿಯಲ್ಲ. ಸದರಿ ನನ್ನ ಅಣ್ಣ ರಕ್ಷಣಾ ವೇದಿಕೆಯ ಸದಸ್ಯ ಇರುತ್ತಾನೆ ಎಂದರೆ ಸರಿ. ಸದರಿ ಅವರನ್ನು ಕರೆದುಕೊಂಡು ಹೋಗಿ ಆರೋಪಿತರ ವಿರುದ್ಧ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಿನಾಂಕಃ 06-09-2021 ರಂದು 10.30 ಗಂಟೆ ಸುಮಾರಿಗೆ ನಮ್ಮ ಅಂಗಡಿಯ ಹತ್ತಿರ ನಾನು ಮತ್ತು ಚಾಸಾಃ 1 ರವರು ಇರುವಾಗ ಆರೋಪಿತರು ಎಲ್ಲರೂ ಬಂದು ಅವಾಚ್ಯ ಶಬ್ದಗಳಿಂದ ಬೈದು, ಹೊಡೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನನಗೆ ಮುಖಕ್ಕೆ ಹೊಡೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನನಗೆ ಎದೆಗೆ ಹೊಡೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಂಗಿ ಹಿಡಿದು ಹೊಡೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಕೆಳಗೆ ದಬ್ಬಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಕಿರಾಣಿ ಅಂಗಡಿಯ ಹತ್ತಿರ ಓಡಿ ಹೋಗಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಆರೋಪಿತನು ಜೀವ ಬೆದರಿಕೆಯನ್ನು ಹಾಕಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಎಲ್ಲರೂ ಅಡ್ಡಗಟ್ಟಿ ನಿಲ್ಲಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇರುವುದಿಲ್ಲ.

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು ಯಾದಗಿರಿ